# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1444 |
| ಮಾನ್ಯ ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 16/03/2026 |
| ಉತ್ತರಿಸಬೇಕಾದ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಆರೋಗ್ಯ ಇಲಾಖೆಯಲ್ಲಿ ಉದ್ಭವವಾಗಿರುವ ಆಡಳಿತಾತ್ಮಕ ಹಾಗೂ ಕಾರ್ಯನಿರ್ವಹಣಾ ಸಮಸ್ಯೆಗಳ ಬಗ್ಗೆ ಸರ್ಕಾರದ ಗಮನದಲ್ಲಿದೆಯೇ; ಅವು ಯಾವುವು ಮತ್ತು ಅವುಗಳನ್ನು ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು;</td><td>ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಯಾವುದೇ ಆಡಳಿತಾತ್ಮಕ ಹಾಗೂ ಕಾರ್ಯನಿರ್ವಹಣಾ ಸಮಸ್ಯೆಗಳು ಇರುವುದಿಲ್ಲ.</td></tr>
<tr><td>ಆ)</td><td>ಆರೋಗ್ಯ ಇಲಾಖೆ ಸಿಬ್ಬಂದಿ ವಿವಿಧ ಬೇಡಿಕೆಗಳನ್ನು ಮುಂದಿಟ್ಟು ಓಪಿಡಿ (OPD) ಸೇವೆಗಳನ್ನು ಸ್ಥಗಿತಗೊಳಿಸುವ ಮಾಹಿತಿ ನೀಡಿರುವುದು ಸರ್ಕಾರದ ಗಮನದಲ್ಲಿದೆಯೇ; ಎನ್‌ಎಚ್‌ಎಮ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ವೇತನ ಹೆಚ್ಚಳವನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಿ ನಂತರದ ವೇತನ ಹೆಚ್ಚಿಸದಿರಲು ಕಾರಣವೇನು; ಈ ಕುರಿತು ಸರ್ಕಾರದ ನಡೆ ಮತ್ತು ಪರಿಹಾರ ಕ್ರಮಗಳೇನು;</td><td>ಬಂದಿದೆ<br><br>ದಿನಾಂಕ : 10/03/2026ರಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಹಾಗೂ ಆರೋಗ್ಯ ಇಲಾಖೆ ವಿವಿಧ ವೃಂದದ ಸಂಘಗಳ ಪ್ರತಿನಿಧಿಗಳೊಂದಿಗೆ ಸರ್ಕಾರವು ಸಭೆ ನಡೆಸಿ, ಆರೋಗ್ಯ ಇಲಾಖೆಯ ಸಿಬ್ಬಂದಿಗಳ ವಿವಿಧ ಬೇಡಿಕೆಗಳನ್ನು ಈಡೇರಿಸಲು ತೀರ್ಮಾನಿಸಲಾಗಿದ್ದು, ತಾತ್ಕಾಲಿಕವಾಗಿ ಮುಷ್ಕರವನ್ನು ಹಿಂತೆಗೆದುಕೊಂಡಿದ್ದು, OPD ಸೇವೆಗಳನ್ನು ಸ್ಥಗಿತಗೊಳಿಸದೇ ಕಾರ್ಯಸ್ಥಿತಿಯಲ್ಲಿರುತ್ತದೆ.<br><br>ರಾಷ್ಟ್ರೀಯ ಆರೋಗ್ಯ ಅಭಿಯಾನದ ಮಾರ್ಗಸೂಚಿಯಂತೆ ರಾಜ್ಯ/ಜಿಲ್ಲೆಗಳಲ್ಲಿ ಗುತ್ತಿಗೆ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಭಾರತ ಸರ್ಕಾರದ RoP ಅನುಮೋದನೆಯಂತೆ ಪ್ರತಿ ವರ್ಷ ಶೇ. 5ರಷ್ಟು ಹೆಚ್ಚುವರಿ ವೇತನ ನೀಡಲಾಗುತ್ತಿದೆ.</td></tr>
<tr><td>ಇ)</td><td>ರೇಟ್ ಕಾರ್ಡ್ ಆಧಾರದಲ್ಲಿ ಔಷಧ ಖರೀದಿ ಸರ್ಕಾರಕ್ಕೆ ಹೆಚ್ಚುವರಿ ಆರ್ಥಿಕ ಹೊರೆಯಾಗುತ್ತಿದೆಯೇ; ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆ ಒದಗಿಸುತ್ತಿರುವ ಸಿ.ಟಿ. ಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್ ಸೇರಿದಂತೆ ಇತರ ಡಯಾಗ್ನೋಸ್ಟಿಕ್ ಸೇವಾ ಪೂರೈಕೆದಾರರಿಗೆ ಬಾಕಿ ಬಿಲ್ಲುಗಳನ್ನು ಪಾವತಿಸದಿರಲು ಕಾರಣವೇನು; ಬಾಕಿ ಮೊತ್ತ ಎಷ್ಟು; ಪಾವತಿ ಮಾಡಿ ಈ ಸೇವೆಗಳನ್ನು ಯಾವಾಗ ಪುನರಾರಂಭಿಸಲಾಗುವುದು;</td><td>ಈ ಸೌಲಭ್ಯಗಳನ್ನು ಒದಗಿಸುತ್ತಿರುವ ಖಾಸಗಿ ಸೇವಾ ಸಂಸ್ಥೆಗಳಲ್ಲಿ 2019-2020 ಸಾಲಿನಿಂದಲೂ (Service providers) ಸರ್ಕಾರವು ಬಾಕಿ ಉಳಿಸಿಕೊಂಡಿರುವ ಬಿಲ್ ಪಾವತಿಯ ಅಂದಾಜು ಮೊತ್ತ ಈ ಕೆಳಗಿನಂತಿದೆ.-
<table>
<tr><td>1.</td><td>M/s Krsnaa Diagnostics</td><td>ರೂ. 23,09,95,260/-</td></tr>
<tr><td>2</td><td>M/s K.V. Hanchinal Pvt., Ltd</td><td>ರೂ. 6,29,25,800/-</td></tr>
<tr><td>3</td><td>M/s Dhalaxmi Dresses</td><td>ರೂ. 1,97,56,125/-</td></tr>
</table>
ಇದಲ್ಲದೆ ಶೇ. 5 ವಾರ್ಷಿಕ ಹೆಚ್ಚಳ ನೀಡದಿರುವ ಅಂದಾಜು ಮೊತ್ತ ಈ ಕೆಳಗಿನಂತಿದೆ.-
<table>
<tr><td>1.</td><td>M/s Krsnaa Diagnostics (Nov. 2024ರವರೆಗೆ).</td><td>ರೂ. 4743.60 ಲಕ್ಷಗಳು</td></tr>
<tr><td>2</td><td>M/s K.V. Hanchinal Pvt., Ltd (Sep. 2024 – ರವರೆಗೆ)</td><td>ರೂ. 449.47 ಲಕ್ಷಗಳು</td></tr>
<tr><td>3</td><td>M/s Dhalaxmi Dresses (Oct. 2024ರವರೆಗೆ)</td><td>ರೂ. 32.70 ಲಕ್ಷಗಳು</td></tr>
</table></td></tr>
</table>

| | | |
|---|---|---|
| | | **ಬಾಕಿ ಉಳಿಸಿಕೊಂಡಿರುವ ಬಿಲ್ ಪಾವತಿಯ ಮೊತ್ತಕ್ಕೆ ಕಾರಣಗಳು ಈ ಕೆಳಕಂಡಂತಿವೆ:-**<br>ಪ್ರಸ್ತುತ PPP ಮಾದರಿಯಲ್ಲಿ ರೋಗಿಗಳಿಗೆ ಅನಗತ್ಯ ಸ್ಕ್ಯಾನಿಂಗ್/ ಒಂದೇ ರೋಗಿಗೆ ಒಂದೆ ದಿವಸ ಒಂದಕ್ಕಿಂತ ಹೆಚ್ಚು ಸ್ಕ್ಯಾನ್‌ಗಳನ್ನು ಮಾಡಿ ರೋಗಿಗಳನ್ನು ಅನಗತ್ಯ ವಿ-ಕಿರಣಕ್ಕೆ/ ಕ್ಷ-ಕಿರಣಕ್ಕೆ ಒಡ್ಡುತ್ತಿರುವುದರಿಂದ ರೋಗಿಗಳ ಜೀವಕ್ಕೆ ಅಪಾಯಕಾರಿ ಆಗಿರುವುದನ್ನು ಗಮನಿಸಲಾಗಿ, ಇದರಿಂದ ದುಷ್ಪರಿಣಾಮಗಳು ಉಂಟಾಗುವ ಸಂಭವವಿರುತ್ತದೆ ಹಾಗೂ Contract Scansಗಳಿಗೆ ಶಿಫಾರಸ್ಸು ಮಾಡುವ ಮುನ್ನ ಅಗತ್ಯ ಪ್ರಯೋಗಾಲಯ ಪರೀಕ್ಷೆಗಳನ್ನು ಮಾಡಿಸದೇ ಇರುವುದು ಮುಂತಾದ ನ್ಯೂನ್ಯತೆಗಳನ್ನು ಗಮನಿಸಲಾಗಿದೆ.<br><br>ಈ ಎಲ್ಲಾ ನ್ಯೂನ್ಯತೆಗಳ ಹಿನ್ನೆಲೆಯಲ್ಲಿ CT ಮತ್ತು MRI ಸ್ಕ್ಯಾನ್‌ಗಳ ಶಿಫಾರಸ್ಸು ಪದ್ಧತಿಯನ್ನು (Referral system) ಸುಗಮಗೊಳಿಸಲು ಮತ್ತು ಅನಗತ್ಯ ಸ್ಕ್ಯಾನ್‌ಗಳನ್ನು ತಪ್ಪಿಸಲು ಹಾಗೂ ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಲು ಮತ್ತು ಅನಗತ್ಯ ವಿಕಿರಣಕ್ಕೆ/ಕ್ಷ-ಕಿರಣಕ್ಕೆ ಒಡ್ಡುತ್ತಿರುವುದರಿಂದ ಜನ ಸಮುದಾಯದ ಆರೋಗ್ಯಕ್ಕೆ/ ಜೀವಕ್ಕೆ ಅಪಾಯಕಾರಿ ಆಗುವುದನ್ನು ತಪ್ಪಿಸಲು ಸರ್ಕಾರದ ಆದೇಶ ಸಂಖ್ಯೆ : ಆಕುಕ 326 ಎಸ್‌ಪಿಆರ್ 2024, ದಿನಾಂಕ : 27/11/2024ರಂತೆ SAST ಮೂಲಕ CT ಮತ್ತು MRI ಸ್ಕ್ಯಾನ್ ಸೇವೆಗಳನ್ನು ಅನುಷ್ಠಾನಗೊಳಿಸಲಾಗಿದೆ.<br><br>M/s Krsnaa Diagnostics ರವರು ಸ್ವಯಂ ಪ್ರೇರಿತರಾಗಿ ದಿನಾಂಕ : 24/02/2026ರಿಂದ CT ಮತ್ತು MRI ಸೇವೆಗಳನ್ನು ಎಂದಿನಂತೆ ಪುನರ್ ಆರಂಭಿಸಿರುತ್ತದೆ. |
| ಈ) | ಮಂಗಳೂರಿನ ಸುಮಾರು 170ಕ್ಕಿಂತ ಹೆಚ್ಚು ವರ್ಷಗಳ ಇತಿಹಾಸ ಹೊಂದಿರುವ ವೆನ್‌ಲಾಕ್‌ನಲ್ಲಿ ಸಿಬ್ಬಂದಿ ಕೊರತೆಯಿದೆಯೇ; ಆರೋಗ್ಯ ಇಲಾಖೆ ಮೂಲಭೂತ ಸೇವಾ ಇಲಾಖೆಯಾಗಿದ್ದು, ಅಗತ್ಯ ಪ್ರಮಾಣದ ವೈದ್ಯರು, ನರ್ಸ್‌ಗಳು ಹಾಗೂ ಇತರ ಸಿಬ್ಬಂದಿಯ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ದಕ್ಷಿಣ ಕನ್ನಡ ಜಿಲ್ಲೆಯ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯು 905 ಹಾಸಿಗೆಗಳ ಪೂರ್ಣ ಪ್ರಮಾಣದ ಎಲ್ಲಾ ತಜ್ಞರು ಮತ್ತು ಸೌಲಭ್ಯವುಳ್ಳ ಆಸ್ಪತ್ರೆಯಾಗಿ ಕಾರ್ಯನಿರ್ವಹಿಸುತ್ತಿದೆ. ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯು ಕಸ್ತೂರಬಾ ವೈದ್ಯಕೀಯ ಮಹಾವಿದ್ಯಾಲಯ (KMC) ಮಂಗಳೂರು-ನೊಂದಿಗೆ ಖಾಸಗಿ ಸಹಭಾಗಿತ್ವದ ಒಡಂಬಡಿಕೆಯನ್ನು ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ವೈದ್ಯರು, ನರ್ಸ್‌ಗಳು ಹಾಗೂ ಇತರ ಸಿಬ್ಬಂದಿಯ ಕೊರತೆ ಇರುವುದಿಲ್ಲ.<br><br>ಮುಂದುವರೆದು ಒಡಂಬಡಿಕೆಯ ಪ್ರಕಾರ ಕೆ.ಎಂ.ಸಿ., ಮಂಗಳೂರು, ಸಹಭಾಗಿತ್ವದಲ್ಲಿ ಸಾಮಾನ್ಯ ತಜ್ಞತೆಗಳಾದ (Board speciality) Orthopaedics, Dermatology, Ophthalmology, General Medicine ಅಲ್ಲದೆ super specialty ವಿಭಾಗದಲ್ಲಿ Urology, Cardiac Cath Lab, Pediatrics Surgery, Blood transfusion centre, DRTB (Drug resistant TB Centre) Centre, ಸಿಬಿನ್ಯಾಟ್ ವಿಭಾಗ, ಡೇಕೇರ್ ಕೀಮೋಥೆರಪಿ 23 ಹಾಸಿಗೆಗಳ, Cardiothoracic & Vascular Surgery, Neurosurgery, Neurology, Nephrology, Comprehensive cancer care ವಿಭಾಗದಲ್ಲಿ Radiation Oncologist, Medical Oncologist, Surgical Oncologist, Plastic Surgeon ಇತ್ಯಾದಿಗಳನ್ನು ಒಳಗೊಂಡಂತೆ ಉತ್ತಮ ಸೇವೆಗಳನ್ನು ನೀಡಲಾಗುತ್ತಿದೆ. |

| | | |
|---|---|---|
| ಊ) | ಒಟ್ಟಾರೆಯಾಗಿ, ರಾಜ್ಯದ ಆರೋಗ್ಯ ವ್ಯವಸ್ಥೆಯನ್ನು ಮತ್ತು ಇಲಾಖೆಯನ್ನು ಸುಧಾರಿಸಲು ಸರ್ಕಾರ ರೂಪಿಸಿರುವ ಸಮಗ್ರ ಕಾರ್ಯಯೋಜನೆಯೇನು; ಅವುಗಳನ್ನು ಯಾವ ಕಾಲಮಿತಿಯೊಳಗೆ ಜಾರಿಗೆ ತರಲಾಗುವುದು? | ಎಂ.ಆರ್.ಐ ಮತ್ತು ಸಿ.ಟಿ. ಸ್ಕ್ಯಾನ್ ಸೌಲಭ್ಯಗಳನ್ನು ಉತ್ತಮಗೊಳಿಸಲು ಕೈಗೊಂಡ ಕ್ರಮಗಳು :-<br>• ಪ್ರಸ್ತುತ PPP ಮಾದರಿಯಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಲು In-House ಮಾದರಿಯಲ್ಲಿ CT ಮತ್ತು MRI ಸ್ಕ್ಯಾನ್ ಸೇವೆಗಳನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ.<br>• CT ಮತ್ತು MRI ಸ್ಕ್ಯಾನ್ ಯಂತ್ರಗಳ ಖರೀದಿಗೆ ಟೆಂಡರ್ ಪ್ರಕ್ರಿಯೆ ರಾಜ್ಯಮಟ್ಟದಲ್ಲಿ ಜಾರಿಯಲ್ಲಿದ್ದು, ಹಂತ ಹಂತವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತದೆ.<br>• ರಾಜ್ಯದ ಜನಸಂಖ್ಯೆಗೆ ಅನುಗುಣವಾಗಿ ಆಯಾ ಜಿಲ್ಲೆಯಲ್ಲಿನ ಆಸ್ಪತ್ರೆಗಳಿಗೆ ಅವಶ್ಯಕವಿರುವ ಸಾರ್ವಜನಿಕರಿಗೆ ಆರೋಗ್ಯ ಸೇವೆ ಒದಗಿಸುವ ಕ್ರಮ ಕೈಗೊಳ್ಳಲಾಗುತ್ತಿದೆ. |

**HFW/42/HSD/2026)**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು